# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
# ಕೆಂಗೇರಿ ಉಪ ವಿಭಾಗ, ವಾರ್ಡ್ ನಂ.198, ಹೆಮ್ಮಿಗೆಪುರ
# ವಾರ್ಡ್ ಸಮಿತಿ ಸಭೆ ದಿನಾಂಕ: 06/02/2021 ರ
# ಸಭಾ ನಡವಳಿ

ದಿನಾಂಕ: 06/02/2021 ರಂದು ಬೆಳಿಗ್ಗೆ 11.30 ಗಂಟೆಗೆ ವಾರ್ಡ್ ನಂ.198, ಹೆಮ್ಮಿಗೆಪುರ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯನ್ನು ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಪಟ್ಟಣಗೆರೆ, ಬಿ.ಬಿ.ಎಂ.ಪಿ. ಸಮುದಾಯಭವನ ಕಟ್ಟಡದಲ್ಲಿ ನಡೆದ ವಾರ್ಡ್ ಸಮಿತಿಯ ಸಭೆಯ ನಡವಳಿಗಳು

ಹಾಜರಿದ್ದವರು:

| ಕ್ರ ಸಂ | ಸಭೆಗೆ ಹಾಜರಾಗಿರುವ ಅಧಿಕಾರಿಗಳ | ಹುದ್ದೆ |
|---|---|---|
| 1 | ಶ್ರೀ ಶಿವಕುಮಾರ್ | ನೋಡಲ್ ಅಧಿಕಾರಿ; ವಾರ್ಡ್ ನಂ.198(ಹೆಮ್ಮಿಗೆಪುರ) ಹಾಗೂ ಕಾರ್ಯಪಾಲಕ ಅಭಿಯಂತರರು, ಉಪ ನಿರ್ದೇಶಕರ ಕಛೇರಿ ಕಟ್ಟಡ ಪರವಾನಗೆ ಕೋಶ-ಉತ್ತರ |
| 2 | ಶ್ರೀ ದಯಾನಂದ.ಎನ್ | ಸಹಾಯಕ ಅಭಿಯಂತರರು, ವಾರ್ಡ್-198, ಹೆಮ್ಮಿಗೆಪುರ |
| 3 | ಶ್ರೀ ಜಿ.ಐ. ಕೆಂಪೇಗೌಡ | ಕಿರಿಯ ಅಭಿಯಂತರರು ಬೆಸ್ಕಾಂ |
| 4 | ಶ್ರೀ ಸಾಯಿ ಸಂದೇಶ್ ಬಿ.ಎಸ್. | ಸಹಾಯಕ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ |
| 5 | ಶ್ರೀ ರಮೇಶ್ ಹೆಚ್.ವಿ | ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಬಿ.ಎಂ.ಪಿ |
| 6 | ಶ್ರೀಮತಿ ನಿರ್ಮಲಾ ವೈ.ಎನ್. | ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 7 | ಶ್ರೀ ರವಿಚಂದ್ರ ಚಾರಿ | ಹಿರಿಯ ಆರೋಗ್ಯ ಪರಿವೀಕ್ಷಕರು ಬಿ.ಬಿ.ಎಂ.ಪಿ. |
| 8 | ಶ್ರೀ ರಮೇಶ್ ಬಿ | ಪಶು. ಪಾಲನಾ ವೈದ್ಯಾಧಿಕಾರಿ ಬಿ.ಬಿ.ಎಂ.ಪಿ. |

Scanned with CamScanner

| | | |
|---|---|---|
| 9 | ಶ್ರೀಮತಿ ದೀಪಾ.ವಿ | ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 10 | ಶ್ರೀಮತಿ ಮೋನಿಕಾ | ಕಿರಿಯ ಆರೋಗ್ಯ ಪರಿವೀಕ್ಷಕರು ಬಿಬಿಎಂಪಿ |
| 11 | ಶ್ರೀ ಬಸವೇಗೌಡ ಸಿ.ಕೆ. | ಕಂದಾಯ ಪರಿವೀಕ್ಷಕರು ಬಿ.ಬಿ.ಎಂ.ಪಿ. |
| 12 | ಚಂದನ್.ಎಸ್. | ಮಾರ್ಷಲ್ ವಾರ್ಡ್ ಸಂಖ್ಯೆ: 198ರ |
| 13 | ಶ್ರೀ ಎ.ಎಸ್. ಕೃಷ್ಣಾನಾಯಕ್ | ಕೆಲಸ ಪರಿವೀಕ್ಷಕರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ |

ಶ್ರೀ ದಯಾನಂದ.ಎನ್, ಸಹಾಯಕ ಅಭಿಯಂತರರು ಹಾಗೂ ವಾರ್ಡ್ ಕಮಿಟಿ ಕಾರ್ಯದರ್ಶಿ ರವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ಸಭೆಗೆ ಹಾಜರಾಗಿದ್ದ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರಿಗೆ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ ಹಿಂದಿನ ಸಭಾ ನಡವಳಿಯನ್ನು ಓದಿ ರೆಕಾರ್ಡ್ ಮಾಡಲಾಯಿತು ಮತ್ತು ತೆಗೆದುಕೊಂಡ ಕ್ರಮಗಳ ಬಗ್ಗೆ ಚರ್ಚಿಸಲಾಯಿತು.

1. **<u>ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-</u>** ಅಧ್ಯಕ್ಷರು, ಕೋವಿಡ್-19ರ ಸಾಂಕ್ರಾಮಿಕ ರೋಗದ ಬಗ್ಗೆ ಹಾಗೂ ಸರ್ಕಾರ ಮತ್ತು ಬಿ.ಬಿ.ಎಂ.ಪಿ. ವತಿಯಿಂದ ನೀಡುತ್ತಿರುವ ಸೌಲಭ್ಯ/ಸೌವಲತ್ತುಗಳು ಹಾಗೂ ಕೋವಿಡ್ ಪರಿವೀಕ್ಷಣೆಯಿಂದ ಮೊದಲುಗೊಂಡು ಆಸ್ಪತ್ರೆಗೆ ದಾಖಲಾಗುವವರೆಗೆ ಮತ್ತು ಕೋವಿಡ್-19 ಪರೀಕ್ಷೆಯ ಬಗ್ಗೆ ಸವಿಸ್ತಾರವಾಗಿ ಸಭೆಗೆ ವಿವರಿಸಿದರು. ಕೋವಿಡ್-19ರ ಪರೀಕ್ಷೆಯನ್ನು ಹೆಚ್ಚು ಮಾಡುವ ಬಗ್ಗೆ ಸಹಕರಿಸುವಂತೆ ಸಭೆಯಲ್ಲಿದ್ದ ವೆಲ್‌ಫೇರ್ ಅಸೋಸಿಯೇಷನ್ ಅಧ್ಯಕ್ಷರುಗಳು ಮತ್ತು ಅಧಿಕಾರಿ ವರ್ಗದವರಿಗೆ ವಿನಂತಿಸಿ, ಆರೋಗ್ಯ ಪರಿವೀಕ್ಷಕರು ಮತ್ತು ಆರೋಗ್ಯಾಧಿಕಾರಿಗಳು ಸದರಿಯವರನ್ನು ಸಂಪರ್ಕಿಸಿ ಸಹಕಾರ ಪಡೆದುಕೊಳ್ಳಲು ಸೂಚಿಸಿದರು ಮತ್ತು ಮಾಷಲ್‌ಗಳನ್ನು ನಿಯೋಜಿಸಿ ಮಾಸ್ಕ್ ಧರಿಸದೇ ಇರುವವರಿಗೆ ದಂಡವನ್ನು ವಿಧಿಸಲು ಸೂಚಿಸಲಾಯಿತು.

2. **<u>ಅರಣ್ಯ ವಿಭಾಗ, ಬಿಬಿಎಂಪಿ:-</u>** ವಾರ್ಡ್ ನಂ.198ರ ವ್ಯಾಪ್ತಿಯಲ್ಲಿ ಬರುವ ಬಿ.ಸಿ.ಸಿ.ಹೆಚ್.ಎಸ್. ಬಡಾವಣೆಯಲ್ಲಿ ಮರವು ರಸ್ತೆಯ ಮೇಲೆ ಬಿದ್ದಿರುವ ಬಗ್ಗೆ ಕ್ರಮ ಕೈಗೊಳ್ಳಲು ಹಾಗೂ ಮರವನ್ನು ತೆರವುಗೊಳಿಸುವಂತೆ ಸಭೆಯ ಗಮನಕ್ಕೆ ತರಲಾಯಿತು. ಈ ಸಂಬಂಧ ಅರಣ್ಯ ವಿಭಾಗದ ಅಧಿಕಾರಿಗಳು

Scanned with CamScanner

ಎಲ್ಲಾ ಸಭೆಗಳಿಗೆ ಗೈರು ಹಾಜರಾಗಿರುವುದನ್ನು ನೋಡಲ್ ಅಧಿಕಾರಿಗಳು ಸಭೆಯಲ್ಲಿ ಗಮನಿಸಿದರು. ಈ ಸಂಬಂಧ ಮೇಲಾಧಿಕಾರಿಗಳಿಗೆ ವರದಿ ಮಾಡಲು ತೀರ್ಮಾನಿಸಲಾಯಿತು.

3. <u>ಬೆಂಗಳೂರು ಜಲ ಮಂಡಳಿಗೆ ಸಂಬಂಧಿಸಿದ:</u>- ವಾರ್ಡ್ ನಂ.198ರಲ್ಲಿ ಬರುವ ಪಟ್ಟಣಗೆರೆ ಮುಖ್ಯರಸ್ತೆಯ ಪಾರಸ್ ಗ್ಲೋಬಲ್ ಕುಟೀರ ಅಪಾರ್ಟ್‌ಮೆಂಟ್‌ಗೆ ಕುಡಿಯುವ ನೀರಿನ ಹಾಗೂ ಒಳ ಚರಂಡಿ ವ್ಯವಸ್ಥೆಯನ್ನು ಕಲ್ಪಿಸುವಂತೆ ಸಭೆಯಲ್ಲಿ ಕೋರಲಾಯಿತು. ಈ ಸಂಬಂಧ ನೋಡಲ್ ಅಧಿಕಾರಿಗಳು ಮಾತನಾಡಿ ಈ ಸಂಬಂಧ ಕ್ರಮ ಕೈಗೊಳ್ಳುವಂತೆ ಹಾಜರಿದ್ದ ಜಲ ಮಂಡಳಿ ಸಹಾಯಕ ಅಭಿಯಂತರರಿಗೆ ತಿಳಿಸಿದರು.

4. <u>ವಿದ್ಯುತ್ ಬೀದಿ ದೀಪಗಳ ನಿರ್ವಹಣೆ:</u>- ವಾರ್ಡ್ ನಂ.198ರ ವ್ಯಾಪ್ತಿಯಲ್ಲಿ ಬರುವ ಬಿ.ಸಿ.ಸಿ. ಹೆಚ್.ಎಸ್ ಬಡಾವಣೆಯಲ್ಲಿ ವಿದ್ಯುತ್ ದೀಪಗಳು ಕಾರ್ಯನಿರ್ವಹಿಸುತ್ತಿಲ್ಲವೆಂದು ಹಾಗೂ ವಿದ್ಯುತ್ ದೀಪಗಳನ್ನು ಆನ್ & ಆಫ್ ಮಾಡಲು ಆಪರೇಟರ್ ಅಥವಾ ಟೈಮರ್ ಸ್ವಿಚ್ ಇರುವುದಿಲ್ಲವೆಂದು ಸಭೆಗೆ ತಿಳಿಸಿದರು. ಈ ಸಂಬಂಧ ಬಿ.ಬಿಎಂ.ಪಿ.ಯ ವಿದ್ಯುತ್ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಮಾತನಾಡಿ ಹೊಸದಾಗಿ ವಿದ್ಯುತ್ ದೀಪಗಳ ನಿರ್ವಹಣೆಗಾಗಿ ಕಾರ್ಯಾದೇಶವನ್ನು ನೀಡಲಾಗಿದ್ದು, ನೂತನ ಗುತ್ತಿಗೆದಾರರಿಗೆ ಸದರಿ ದೂರಿನ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲಾಗುವುದೆಂದು ತಿಳಿಸಿದರು.

5. <u>ಪಶುಪಾಲನಾ ವಿಭಾಗ, ಬಿ.ಬಿ.ಎಂ.ಪಿ, ರಾರಾನಗರ ವಲಯ:</u>- ವಾರ್ಡ್ ನಂ.198ರ ವ್ಯಾಪ್ತಿಯಲ್ಲಿ ಬರುವ ಬಿ.ಹೆಚ್.ಇ.ಎಲ್. ಬಡಾವಣೆ ಹಾಗೂ ಸುತ್ತಮುತ್ತಲಿನ ಬಡಾವಣೆಗಳಲ್ಲಿ ಬೀದಿ ನಾಯಿಗಳ ಸಂಖ್ಯೆಯು ಹೆಚ್ಚಾಗಿದ್ದು ಸದರಿ ಸಮಸ್ಯೆಯನ್ನು ಪರಿಹರಿಸಲು ಸಭೆಯ ಗಮನಕ್ಕೆ ತರಲಾಯಿತು. ಈ ಸಂಬಂಧ ನೋಡಲ್ ಅಧಿಕಾರಿಗಳು ಮಾತನಾಡಿ ಸಭೆಯಲ್ಲಿಯೇ ಸದರಿ ದೂರಿನ ಬಗ್ಗೆ ವಲಯದ ಪಶುಪಾಲನಾ ವೈಧ್ಯಾಧಿಕಾರಿಗಳೊಂದಿಗೆ ಮಾತನಾಡಿ ಸದರಿ ಸಮಸ್ಯೆಯನ್ನು ಪರಿಹರಿಸಬೇಕಾಗಿ ತಿಳಿಸಿದರು.

7. <u>ವಾರ್ಡ್‌ನ ವಿವಿಧ ಕಾಮಗಾರಿಗಳ ಅಭಿವೃದ್ಧಿ ಕಾರ್ಯಗಳ ಬಗ್ಗೆ:</u>- 1)ವಾರ್ಡ್ ನಂ.198ರ ವ್ಯಾಪ್ತಿಯಲ್ಲಿ ಬರುವ ಪಟ್ಟಣಗೆರೆ ಮುಖ್ಯರಸ್ತೆಯ ಪಾರಸ್ ಗ್ಲೋಬಲ್ ಕುಟೀರ ಅಪಾರ್ಟ್‌ಮೆಂಟ್‌ಗೆ ಸಂಪರ್ಕಿಸುವ ರಸ್ತೆಯನ್ನು ಅಭಿವೃದ್ಧಿ ಪಡಿಸಿಕೊಡಬೇಕಾಗಿ ಕೋರಲಾಯಿತು. 2) ವಾಜರಹಳ್ಳಿ ಬಾಲಾಜಿ ಬಡಾವಣೆಯ ರಸ್ತೆಗಳು ಸಂಪೂರ್ಣ ಹಾಳಾಗಿದ್ದು, ಅಭಿವೃದ್ಧಿ ಪಡಿಸಿಕೊಡಬೇಕಾಗಿ ಸಭೆಗೆ ಸೂಚಿಸಲಾಯಿತು. 3) ಬಿ.ಸಿ.ಸಿ.ಹೆಚ್.ಎಸ್. ಬಡಾವಣೆಗೆ ಮೂಲಭೂತ ಸೌಕರ್ಯವನ್ನು ಒದಗಿಸಲು ಸಭೆಯಲ್ಲಿ ವಿಷಯವನ್ನು ಮಂಡಿಸಲಾಯಿತು. 4) ಕೇಂದ್ರೀಯ ನಗರದಲ್ಲಿ ಒಳಚರಂಡಿಯು ಕಟ್ಟಿಕೊಂಡಿದ್ದು, ದುರಸ್ಥಿಪಡಿಸಲು ಕೋರಲಾಯಿತು. ಈ ವಿಷಯಗಳ ಸಂಬಂಧ

Scanned with CamScanner

ನೋಡಲ್ ಅಧಿಕಾರಿಗಳು ಮಾತನಾಡಿ ಸದರಿ ಸಮಸ್ಯೆಯನ್ನು ಶೀಘ್ರವಾಗಿ ಪರಿಹರಿಸುವಂತೆ ವಾರ್ಡ್‌ನ ಸಹಾಯಕ ಅಭಿಯಂತರರಿಗೆ ಸೂಚಿಸಿದರು.

(ದಯಾನಂದ.ಎನ್)
ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್–198, ಹೆಮ್ಮಿಗೆಪುರ

(ಶಿವಕುಮಾರ್)
ನೋಡಲ್ ಅಧಿಕಾರಿ
ವಾರ್ಡ್ ಸಮಿತಿ
ವಾರ್ಡ್–198, ಹೆಮ್ಮಿಗೆಪುರ



ಪ್ರತಿಯನ್ನು:–

1) ಮಾನ್ಯ ಸಹಕಾರ ಸಚಿವರು, ಕರ್ನಾಟಕ ಸರ್ಕಾರ ರವರ ಕಛೇರಿಗೆ ಸಲ್ಲಿಸಿದೆ.
2) ಕೌನ್ಸಿಲ್ ಕಾರ್ಯದರ್ಶಿ, ಬಿ.ಬಿ.ಎಂ.ಪಿ. ಕೇಂದ್ರ ಕಛೇರಿ ರವರ ಅವಗಾಹನೆಗೆ ಸಲ್ಲಿಸಿದೆ.
3) ಜಂಟಿ ಆಯುಕ್ತರು, ರಾಜರಾಜೇಶ್ವರಿನಗರ ವಲಯರವರ ಅವಗಾಹನೆಗೆ ಸಲ್ಲಿಸಿದೆ.
4) ಮುಖ್ಯ ಅಭಿಯಂತರರು, ರಾಜರಾಜೇಶ್ವರಿನಗರ ವಲಯರವರ ಅವಗಾಹನೆಗೆ ಸಲ್ಲಿಸಿದೆ.
5) ಅಧೀಕ್ಷಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ, ರಾಜರಾಜೇಶ್ವರಿನಗರ ವಲಯರವರ ಅವಗಾಹನೆಗೆ ಸಲ್ಲಿಸಿದೆ.
6) ಕಾರ್ಯಪಾಲಕ ಅಭಿಯಂತರರು (ಕೆಂಗೇರಿ ವಿಭಾಗ) ರವರ ಅವಗಾಹನೆಗೆ ಸಲ್ಲಿಸಿದೆ.
7) ಕಂದಾಯ ಅಧಿಕಾರಿಗಳು (ಕೆಂಗೇರಿ ವಲಯ) ರವರ ಮಾಹಿತಿಗಾಗಿ ಕಳುಹಿಸಿದೆ.
8) ಕಾರ್ಯಪಾಲಕ ಅಭಿಯಂತರರು (ರಸ್ತೆ ಮೂಲಭೂತ ಸೌಕರ್ಯ, ರಾಜರಾಜೇಶ್ವರಿನಗರ ವಿಭಾಗ) ರವರ ಅವಗಾಹನೆಗೆ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
9) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲ ಮಂಡಳಿ, ರಾಜರಾಜೇಶ್ವರಿನಗರ ಉಪವಿಭಾಗ ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
10) ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ, ರಾಜರಾಜೇಶ್ವರಿನಗರ ವಲಯ ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
11) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ, ಕೆಂಗೇರಿ ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
12) ತೋಟಗಾರಿಕಾ ಅಧೀಕ್ಷಕರು, ರಾಜರಾಜೇಶ್ವರಿನಗರ ವಲಯ ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
13) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲ ಮಂಡಳಿ, ರಾಜರಾಜೇಶ್ವರಿನಗರ ಯೋಜನಾ (110 ಹಳ್ಳಿಗಳು) ಉಪವಿಭಾಗ ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

Scanned with CamScanner